I/467238/2023

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

---

ಸಂಖ್ಯೆ: E-1096150 DPUE-EST10OTRS/148/2023-PLCY

ದಿನಾಂಕ:09-08-2023

## ಜ್ಞಾಪನ

ವಿಷಯ: 2023ರ ಸಾರ್ವತ್ರಿಕ ವರ್ಗಾವಣೆಯ ಕೌನ್ಸೆಲಿಂಗ್‌ಗೆ ಅರ್ಹ / ಅನರ್ಹ ಪ್ರಾಂಶುಪಾಲರು/ ಉಪನ್ಯಾಸಕರ ವಿಷಯವಾರು ವಿವಿಧ ಅದ್ಯತೆಗಳ ಅಂತಿಮ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 12 ಶಾಸನ 2020, ದಿನಾಂಕ:27-03-2020.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 47 ಶಾಸನ 2021, ದಿನಾಂಕ: 18-01-2022.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಪಿ 32 ಟಿಪಿಯು 2021, ದಿನಾಂಕ: 12-05-2022.
4. ಈ ಕಚೇರಿಯ ಜ್ಞಾಪನ ಸಂಖ್ಯೆ: E-1096150 DPUE-EST10OTRS/148/2023-PLCY, ದಿನಾಂಕ:02.06.2023, 22.06.2023, 10.07.2023, 20.07.2023 ಮತ್ತು 02.08.2023.

-*-

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020 ರನ್ವಯ ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಪ್ರಾಂಶುಪಾಲರು / ಉಪನ್ಯಾಸಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2022 ರ ನಿಯಮ 4 (ಹೆಚ್) ರಲ್ಲಿ ಉಲ್ಲೇಖಿಸಿರುವಂತೆ ವರ್ಗಾವಣೆ ವೇಳಾಪಟ್ಟಿ ಪ್ರಕಟಿಸುವ ಮೊದಲು ಪ್ರಾಂಶುಪಾಲರ / ಉಪನ್ಯಾಸಕರ ಅರ್ಹತಾದಾಯಕ ಅಂಕ (Weighted Score) ಗಳನ್ನು ಪ್ರಕಟಿಸುವ ಸಂಬಂಧ ವೇತನ ಸೆಳೆದು ವಿತರಣೆ ಮಾಡುವ ಅಧಿಕಾರಿಯು (DDO) Departmental Online Portal ನ ಲಾಗಿನ್ ಮೂಲಕ ಪ್ರಾಂಶುಪಾಲರ / ಉಪನ್ಯಾಸಕರ ಸೇವಾ ವಿವರಗಳನ್ನು (Update) ನವೀಕರಿಸಲು ದಿನಾಂಕ:05-06-2023 ವರೆಗೆ ಉಲ್ಲೇಖ-4ರಲ್ಲಿ (ದಿನಾಂಕ: 02.06.2023) ಅವಕಾಶ ಕಲ್ಪಿಸಲಾಗಿತ್ತು.

ಅದರಂತೆ, ನವೀಕರಿಸಲ್ಪಟ್ಟ ಸೇವಾ ವಿವರಗಳನ್ವಯ ಪ್ರಾಂಶುಪಾಲರ/ಉಪನ್ಯಾಸಕರ ಅರ್ಹತಾದಾಯಕ ಅಂಕ (Weighted Score) ಗಳ ಪಟ್ಟಿಯನ್ನು ಉಲ್ಲೇಖ-4ರಲ್ಲಿ (ದಿನಾಂಕ:22.06.2023ರಂದು) ಅನುಬಂಧಿಕರಿಸಿ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲ್ಪಟ್ಟಿತ್ತು. ಸದರಿ ಅರ್ಹತಾದಾಯಕ ಅಂಕಪಟ್ಟಿಗೆ ಅಕ್ಷೇಪಣೆಗಳೇನಾದರೂ ಏನಾದರೂ ಇದ್ದಲ್ಲಿ, ಪೂರಕ ದಾಖಲೆಗಳನ್ನು ಪ್ರಾಂಶುಪಾಲರ ದೃಢೀಕರಣದೊಂದಿಗೆ ದಿನಾಂಕ:27.06.2023ರೊಳಗಾಗಿ ಸಲ್ಲಿಸಲು ಸೂಚಿಸಲಾಗಿತ್ತು.

ಅದರಂತೆ, ಉಲ್ಲೇಖ-5ರನ್ವಯ ಸ್ವೀಕೃತವಾದ ಅಕ್ಷೇಪಣೆಗಳನ್ನು ಪರಿಶೀಲಿಸಿ, ನಿಯಮಾನುಸಾರ ಅರ್ಹ ಆಕ್ಷೇಪಣೆಗಳನ್ನು ಪರಿಗಣಿಸಿ, ವೇತನ ಸೆಳೆದು ವಿತರಣೆ ಮಾಡುವ ಅಧಿಕಾರಿಯು (DDO) Departmental Portalನ ಲಾಗಿನ್‌ನಲ್ಲಿ ನವೀಕರಿಸಲ್ಪಟ್ಟ ಸೇವಾ ವಿವರಗಳನ್ವಯ ವರ್ಗಾವಣೆಗೆ ಅರ್ಹ ಪ್ರಾಂಶುಪಾಲರ/ಉಪನ್ಯಾಸಕರ ಅಂತಿಮ ಅರ್ಹತಾದಾಯಕ ಅಂಕಗಳ (Weighted Score) ಪಟ್ಟಿಯನ್ನು ದಿನಾಂಕ:10.07.2023ರಂದು ಪ್ರಕಟಿಸಲಾಗಿತ್ತು. ಅನುಚಿತ ತಪ್ಪು ಮಾಹಿತಿಯನ್ನು ನಮೂದಿಸಿರುವ ಪ್ರಾಂಶುಪಾಲರು, ಸದರಿ ತಪ್ಪುಗಳನ್ನು ಸರಿಪಡಿಸಲು ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮನವಿಗಳನ್ನು ಪರಿಶೀಲಿಸಲಾಗಿ, ದಿನಾಂಕ:20.07.2023ರಂದು ಸಾರ್ವತ್ರಿಕ ವರ್ಗಾವಣೆಗೆ ಅರ್ಹ ಉಪನ್ಯಾಸಕರ ಪಟ್ಟಿಯನ್ನು ಸರಿಪಡಿಸಿ ಪ್ರಕಟಿಸಲಾಗಿತ್ತು.

ಮುಂದುವರೆದು, 2023ರ ಸಾರ್ವತ್ರಿಕ ವರ್ಗಾವಣೆಗೆ ಪ್ರಕಟಿಸಲ್ಪಟ್ಟ ಅರ್ಹ ಪ್ರಾಂಶುಪಾಲರು/ ಉಪನ್ಯಾಸಕರಲ್ಲಿ, ವರ್ಗಾವಣೆ ಬಯಸಿ ವಿವಿಧ ಅದ್ಯತೆಯಡಿ ಅರ್ಜಿ ಸಲ್ಲಿಸಿದ ಪ್ರಾಂಶುಪಾಲರ/ಉಪನ್ಯಾಸಕರ ಅರ್ಜಿಗಳನ್ನು ನಿಯಮಾನುಸಾರ

ಪರಿಶೀಲಿಸಿ, 2023ರ ಸಾರ್ವತ್ರಿಕ ವರ್ಗಾವಣೆಯ ಕೌನ್ಸೆಲಿಂಗ್‌ಗೆ ಅರ್ಹ / ಅನರ್ಹ ಪ್ರಾಂಶುಪಾಲರು/ಉಪನ್ಯಾಸಕರ ವಿಷಯವಾರು ವಿವಿಧ ಅದ್ಯತೆಗಳನ್ನು ಪ್ರತ್ಯೇಕ ಪಟ್ಟಿ ಮಾಡಿ, ತಾತ್ಕಾಲಿಕ ಪಟ್ಟಿಯನ್ನು ದಿನಾಂಕ:02.08.2023ರಂದು ಪ್ರಕಟಿಸಲಾಗಿತ್ತು.

ಪ್ರಕಟಿಸಲ್ಪಟ್ಟ ತಾತ್ಕಾಲಿಕ ಪಟ್ಟಿಗೆ ಅಕ್ಷೇಪಣೆಗಳು ಏನಾದರೂ ಇದ್ದಲ್ಲಿ, ಪೂರಕ ದಾಖಲೆಗಳನ್ನು ಪ್ರಾಂಶುಪಾಲರು ದೃಢೀಕರಿಸಿ, ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರ ಮೂಲಕ ದಿನಾಂಕ:06.08.2023ರೊಳಗಾಗಿ ಜಂಟಿ ನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಬೆಂಗಳೂರು, ಇವರಿಗೆ dpuetransfer22@gmail.com ಇ-ಮೇಲ್ ಮೂಲಕ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಲಾಗಿತ್ತು.

ಅದರಂತೆ, ಉಲ್ಲೇಖ-4ರ ದಿನಾಂಕ: 02.08.2023ರ ಜ್ಞಾಪನದನ್ವಯ ಸ್ವೀಕೃತವಾದ ಅಕ್ಷೇಪಣೆಗಳನ್ನು ಪರಿಶೀಲಿಸಿ, ನಿಯಮಾನುಸಾರ ಅರ್ಹವಾದುದನ್ನು ಪರಿಗಣಿಸಲಾಗಿದೆ. 2023ರ ಸಾರ್ವತ್ರಿಕ ವರ್ಗಾವಣೆಯ ಕೌನ್ಸೆಲಿಂಗ್‌ಗೆ ಅರ್ಹ / ಅನರ್ಹ ಪ್ರಾಂಶುಪಾಲರು/ಉಪನ್ಯಾಸಕರ ವಿಷಯವಾರು ವಿವಿಧ ಅದ್ಯತೆಗಳನ್ನು ಪ್ರತ್ಯೇಕ ಪಟ್ಟಿ ಮಾಡಿ, **ಅಂತಿಮ ಪಟ್ಟಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧಗಳಲ್ಲಿ ಪ್ರಕಟಿಸಲಾಗಿದೆ.**

**Signed by Sindhu B Rupesh**
**Date: 09-08-2023 16:07:46**

ನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ).

**ಇವರಿಗೆ:**

1. ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ - ಅಗತ್ಯ ಕ್ರಮಕ್ಕಾಗಿ.
2. ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ ಕಾಲೇಜುಗಳ) ಪ್ರಾಂಶುಪಾಲರಿಗೆ - ಜಿಲ್ಲಾ ಉಪ ನಿರ್ದೇಶಕರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ ಕಾಲೇಜುಗಳ) ಉಪನ್ಯಾಸಕರಿಗೆ - ಪ್ರಾಂಶುಪಾಲರ ಮೂಲಕ ಅಗತ್ಯ ಕ್ರಮಕ್ಕಾಗಿ.

**ಪ್ರತಿ:**

1. ನಿರ್ದೇಶಕರು/ಜಂಟಿ ನಿರ್ದೇಶಕರು(ಆಡಳಿತ)/(ಮಾನ್ಯತೆ ಮತ್ತು ಅನುದಾನ)/(ಶೈಕ್ಷಣಿಕ) ಇವರ ಆಪ್ತ ಶಾಖೆಗೆ.
2. ಸಹಾಯಕ ನಿರ್ದೇಶಕರು - ಇ-ಆಡಳಿತ, ನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)- ಇಲಾಖಾ ಜಾಲತಾಣದಲ್ಲಿ ಅಳವಡಿಸಲು.
3. ಕಚೇರಿ ಪ್ರತಿ.